**ದಿನಾಂಕ : 22.11.2013ರ ಶುಕ್ರವಾರ ಅಪರಾಹ್ನ 3.00 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರ ಅಧ್ಯಕ್ಷತೆಯಲ್ಲಿ ಕಛೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ನಡಾವಳಿ.**

| ಕ್ರ. ಸ | ಹಾಜರಿದ್ದ ಸದಸ್ಯರು | ಕ್ರ. ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಮಾನ್ಯ ಜಿಲ್ಲಾಧಿಕಾರಿಗಳು, ಅಧ್ಯಕ್ಷರು<br>ಕೊಡಗು ಜಿಲ್ಲೆ, ಮಡಿಕೇರಿ. | 1. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನ ಸಭಾ ಪತಿಗಳು ಹಾಗೂ ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2. | ಮಾನ್ಯ ಶ್ರೀ ಎಂ.ಸಿ.ನಾಣಯ್ಯರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 2. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. |
| 3. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | 3. | ಮಾನ್ಯ ಶ್ರೀ ಟಿ.ಜಾನ್‌ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 4. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 4. | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 5. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | 5. | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಮೈಸೂರು. |
| 6. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. | 6. | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| 7. | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | | |
| 8. | ನಗರ ಯೋಜನಾ ಸದಸ್ಯರು, ಸದಸ್ಯರು<br>ನಗರಾಭಿವೃದ್ಧಿ ಪ್ರಾಧಿಕಾರ,ಮಡಿಕೇರಿ. | | |
| 9. | ಕಾರ್ಯಪಾಲಕ ಅಭಿಯಂತತರು ಸದಸ್ಯರು<br>ಕೆ.ಯು.ಡಬ್ಲ್ಯೂ.ಎಸ್ ಅಂಡ್ ಡಿ.ಬಿ, ಮೈಸೂರು. | | |
| 10 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. | | |
| 11 | ಅಪರ ಜಿಲ್ಲಾಧಿಕಾರಿಗಳು, ವಿಶೇಷ ಆಹ್ವಾನಿತರು<br>ಕೊಡಗು ಜಿಲ್ಲೆ, ಮಡಿಕೇರಿ. | | |

| | | | |
|---|---|---|---|
| 12 | ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. ವಿಶೇಷ ಆಹ್ವಾನಿತರು | | |
| 13 | ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಯವರು, ಕೊಡಗು ಜಿಲ್ಲೆ, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯನವರು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳು ಮತ್ತು ವಿಶೇಷ ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ: 17.01.2013ರಂದು ನಡೆದ ಪ್ರಾಧಿಕಾರದ ಸಭೆಯ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ದಿನಾಂಕ: 17.01.2013ರಂದು ನಡೆದ ಸಭೆಯ ನಡಾವಳಿಯನ್ನು ಓದಲಾಯಿತು ಮತ್ತು ಇದರಲ್ಲಿ ವಿಷಯಸಂಖ್ಯೆ 5)ಗದ್ದಿಗೆ ಉದ್ಯಾನವನವನ್ನು ವಾರ್ಷಿಕವಾಗಿ ನಿರ್ವಹಿಸುವ ಬಗ್ಗೆ,

6)ಖಾಸಗಿ ವಿನ್ಯಾಸ ಅನುಮೋದಿಸುವಾಗ ಸರ್ಕಾರದ ಆದೇಶದಂತೆ 1.00ಎಕರೆಗಿಂತ ಕಡಿಮೆ ಜಾಗವಿದ್ದು, ವಿನ್ಯಾಸ ಅನುಮೋದಿಸುವಾಗ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳಿಗಾಗಿ ಶೇ.15ರಷ್ಟು ಜಾಗವನ್ನು ಕಾದಿರಿಸುವ ಬಗ್ಗೆ,

8)ಮಡಿಕೇರಿ ನಗರದ ಮಹಾಯೋಜನೆಯನ್ನು ತಯಾರಿಸಿ, ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ,

ಈ ಮೇಲಿನ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಸದರಿ ವಿಷಯಗಳನ್ನು ಇಂದಿನ ಸಭೆಯಲ್ಲಿಯೂ ಸಹ ಮಂಡಿಸಿರುವುದರಿಂದ ಸಭಾ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ವಿಷಯಸಂಖ್ಯೆ 7) ಕೆರೆ ಅಭಿವೃದ್ಧಿ ಪಡಿಸುವ ಬಗ್ಗೆ:–ಪ್ರಾಧಿಕಾರವು ಖಾಸಗಿ ವಿನ್ಯಾಸ ಅನುಮೋದಿಸುವಾಗ ಕರ್ನಾಟಕ ರಾಜ್ಯ ಪತ್ರ ಸಂಖ್ಯೆ ವ್ಯಾ.ಶ.ಇ/41/ಶಾಸನ/2011, ದಿನಾಂಕ:03.01.2012ರ ವಿಶೇಷ ಪತ್ರಿಕೆಯಲ್ಲಿ ನಿಗಧಿತ ಶುಲ್ಕದೊಂದಿಗೆ ಕೆರೆ ಅಭಿವೃದ್ಧಿ ಶುಲ್ಕ ಎಕರೆಯೊಂದಕ್ಕೆ ರೂ.1.00ಲಕ್ಷದಂತೆ ಪಾವತಿಸಿಕೊಂಡು ಈ ಹಣದಲ್ಲಿ ಕೆರೆಯನ್ನು ಪುನಶ್ಚೇತನಗೊಳಿಸಲು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಇದರಂತೆ ಪಾಧಿಕಾರವು ವಿಧಿಸುವ ಕೆರೆ ಅಭಿವೃದ್ಧಿ ಶುಲ್ಕದಲ್ಲಿ ಅಂದಾಜು ರೂ. 10.00ಲಕ್ಷದ ವೆಚ್ಚದಲ್ಲಿ ರೋಷನಾರ ಕೆರೆಯನ್ನು ಅಭಿವೃದ್ಧಿ ಪಡಿಸಲು ಪ್ರಾಧಿಕಾರದ ಹಿಂದಿನ ಸಭೆಯಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿ ಕ್ರಮ ವಹಿಸಲು ಆಯುಕ್ತರಿಗೆ ಅಧಿಕಾರ ನೀಡಿ ಸರ್ವಾನುಮತದ ಅಂಗೀಕಾರ ನೀಡಿತ್ತು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರಸಭೆಯಿಂದ ಜಂಟಿ ಸ್ಥಳ ಪರಿಶೀಲನೆ ನಡೆಸಿ, ಕೆರೆಗೆ ಒಳ ಹರಿವಿನ ಜಲ ಮೂಲವನ್ನು ಪರಿಶೀಲಿಸಿ ಕೆರೆಯ ಸುತ್ತಮುತ್ತಲಿನ ಜಮೀನು ಒತ್ತುವರಿಯಾಗಿದ್ದ ಪಕ್ಷದಲ್ಲಿ ಅವುಗಳನ್ನು ತೆರವುಗೊಳಿಸಿ, ಕೆರೆಯ ಸುತ್ತಲೂ ಬಫರ್‌ಝೋನ್‌ನ್ನು ಕಾದಿರಿಸಿಕೊಂಡು ದರಪಟ್ಟಿಯನ್ನು ಸಿದ್ದಪಡಿಸಿ, ಮುಂದಿನ ಕ್ರಮ ವಹಿಸಬಹುದಾಗಿರುತ್ತದೆ ಎಂದು ಸಭೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಯವರು ತಿಳಿಸಿದರು. ಇದಕ್ಕೆ ಮಾನ್ಯ ವಿಧಾನ ಪರಿಷತ್ ಸದಸ್ಯರು ಒಪ್ಪಿ ಕಳೆದ ಸಭೆಯ ನಿರ್ಣಯದಂತೆ ರೂ.10.00ಲಕ್ಷ ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಪಡಿಸಲು ಮಾನ್ಯ ಜಿಲ್ಲಾಧಿಕಾರಿಯವರಿಂದ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದುಕೊಂಡು ನಗರಸಭಾ ಸಹಯೋಗದೊಂದಿಗೆ ಕೆರೆ ಅಭಿವೃದ್ಧಿಯನ್ನು ಪಡಿಸಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಸಲಹೆ ನೀಡಿದರು. ಉಳಿದಂತೆ ಹಿಂದಿನ ಸಭಾ ನಡಾವಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**2) ವಿಷಯ ಸಂಖ್ಯೆ :2**

2013ನೇ ಏಪ್ರಿಲ್ ತಿಂಗಳಿನಿಂದ 2013ನೇ ಸೆಪ್ಟೆಂಬರ್ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1 | ಪರಿಶೀಲನಾ ಶುಲ್ಕ. | ರೂ. | 2,32,089.00 |
| 2 | ಕೆ.ಟಿ.ಸಿ.ಖಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 2,53,107.00 |
| 3 | ಕೆರೆ ಅಭಿವೃದ್ಧಿ ಶುಲ್ಕ | ರೂ. | 9,12,300.00 |
| 4 | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 200.00 |
| 5 | ಬ್ಯಾಂಕ್ ಬಡ್ಡಿ | ರೂ. | 1,28,328.00 |
| 6 | ಠೇವಣಿ ಹಣ ಬಡ್ಡಿ ಸೇರಿಸಿ ಉಳಿತಾಯ ಖಾತೆಗೆ ಮರು ವರ್ಗಾವಣೆ (ಇಂಡಿಯನ್ ಬ್ಯಾಂಕು) | ರೂ. | 11,66,981.00 |
| 7 | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 22,000.00 |
| 8 | ಟಿ.ಡಿ.ಎಸ್ ಹೆಚ್ಚುವರಿ ಪಾವತಿ ಮರು ಜಮೆ | ರೂ. | 3,511.00 |
| 9 | ಇತರೆ ಮೂಲಗಳಿಂದ ಬಂದಿರುವ ಶುಲ್ಕ | ರೂ. | 512.00 |
| | **ಒಟ್ಟು ಜಮೆ** | **ರೂ.** | **27,19,028.00** |

**ಖರ್ಚು**

| | | | |
|---|---|---|---|
| 1. | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆ | ರೂ. | 87,780.00 |
| 2. | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | ರೂ. | 2,21,596.00 |
| 3. | ಸಿಬ್ಬಂದಿ ವೇತನ | ರೂ. | 1,45,484.00 |
| 4. | ಕಂಪ್ಯೂಟರ್‌ಖರೀದಿ ಮತ್ತು ವೆಬ್ ಸೈಟ್ ಅಳವಡಿಕೆ/ನವೀಕರಣ ವೆಚ್ಚ (ಪ್ರಿಂಟರ್, ಫ್ಯಾಕ್ಸ್, ಯು.ಪಿ.ಎಸ್, ಬ್ಯಾಟರಿಮತ್ತು ಫ್ಯಾನ್ ಖರೀದಿ) | ರೂ. | 10,397.00 |
| 5. | ವಿದ್ಯುಚ್ಛಕ್ತಿ ದುರಸ್ಥಿ ಮತ್ತು ಬಿಲ್ ಪಾವತಿ ವೆಚ್ಚ | ರೂ. | 4,609.00 |
| 6 | ಮಹಾಯೋಜನೆ ತಯಾರಿಕೆ ಶುಲ್ಕ | ರೂ | 3,60,000.00 |
| 7. | ದೂರವಾಣಿ ವೆಚ್ಚ | ರೂ. | 8,630.00 |
| 8. | ವಾಹನ ಬಾಡಿಗೆ + ಇಂಧನ ವೆಚ್ಚ | ರೂ. | 1,91,501.00 |
| 9. | ಸ್ಟೇಷನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | ರೂ. | 15,424.00 |
| 10 | ರಾಷ್ಟ್ರೀಯ ಹಬ್ಬ ವಂತಿಕೆ | ರೂ | 2,000.00 |

| | | | |
|---|---|---|---|
| 11 | ಪ್ರಯಾಣಭತ್ಯೆ ಬಿಲ್ ಪಾವತಿ | ರೂ. | 15,418.00 |
| 12 | ಮುದ್ರಣ ವೆಚ್ಚ | ರೂ. | 8,000.00 |
| 13 | ಅಂಚೆ ಚೀಟಿ ಖರೀದಿ ವೆಚ್ಚ | ರೂ. | 1,000.00 |
| 14 | ಪಿಂಚಣಿ ವಂತಿಕೆ ಪಾವತಿ (ನಾಗರಾಜ್. ಕೆ.ವಿ) | ರೂ. | 12,907.00 |
| 15 | ದಿನಪತ್ರಿಕೆ ಖರೀದಿ ವೆಚ್ಚ | ರೂ. | 2,910.00 |
| 16 | ಸಭಾ ಉಪಹಾರ ವೆಚ್ಚ | ರೂ. | 1,000.00 |
| 17 | ರಾಯಲ್ಟಿ + ಟಿ.ಡಿ.ಎಸ್. ಪಾವತಿ+ ಇನ್ ಕಮ್ ಟ್ಯಾಕ್ಸ್+ಸೇಲ್ ಟ್ಯಾಕ್ಸ್ ಪಾವತಿ | ರೂ. | 53,124.00 |
| 18 | ಗದ್ದಿಗೆ ಉದ್ಯಾನವನ ನಿರ್ವಹಣೆ ವೆಚ್ಚ | ರೂ. | 2,93,836.00 |
| 19 | ಇತರೆ ಖರ್ಚು (ಬ್ಯಾಂಕ್ ಚೆಕ್ ಪುಸ್ತಕ ವಿತರಣೆಗೆ) | ರೂ. | 240.00 |
| | **ಒಟ್ಟು ವೆಚ್ಚ** | ರೂ. | **14,35,856.00** |

**ಘೋಷ್ವಾರೆ:**

| | | | |
|---|---|---|---|
| 1. | ಏಪ್ರಿಲ್ 2013ರ ಪ್ರಾರಂಭಿಕ ಶಿಲ್ಕು | ರೂ. | 58,47,162.00 |
| 2. | ಏಪ್ರಿಲ್ 2013 ರಿಂದ ಸೆಪ್ಟೆಂಬರ್ 2013ರವರೆಗಿನ ಜಮೆ | ರೂ. | 27,19,028.00 |
| 3. | ಒಟ್ಟು ಜಮೆ | ರೂ. | **85,66,190.00** |
| 4. | ಏಪ್ರಿಲ್ 2013ರಿಂದ ಸೆಪ್ಟೆಂಬರ್ 2013ರವರೆಗಿನ ಖರ್ಚು | ರೂ. | 14,35,856.00 |
| 5. | 2013ನೇ ಸೆಪ್ಟೆಂಬರ್ ಅಂತ್ಯಕ್ಕೆ ಆಖೈರು ಶಿಲ್ಕು | ರೂ. | **71,30,334.00** |
| 6. | ಠೇವಣಿ ಇಟ್ಟಿರುವುದು | ರೂ. | 74,34,316.00 |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:–**ಏಪ್ರಿಲ್ 2013ರಿಂದ ಸೆಪ್ಟೆಂಬರ್–2013ರವರೆಗಿನ ಜಮಾ 27,19,028/– ಮತ್ತು ಖರ್ಚು 14,35,856/– ಇವುಗಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3)ವಿಷಯ ಸಂಖ್ಯೆ 3 : ಮಡಿಕೇರಿ ನಗರದ ಗದ್ದಿಗೆ ವ್ಯಾಪ್ತಿಯ ಅಂದಾಜು 5.00ಎಕರೆ ಜಮೀನಿನಲ್ಲಿ ಈಗಾಗಲೇ ಅಭಿವೃದ್ಧಿ ಪಡಿಸಿರುವ ಉದ್ಯಾನವನಕ್ಕೆ ಹನಿ ನೀರಾವರಿ ಯೋಜನೆಯನ್ನು ಅಳವಡಿಸುವುದು ಮತ್ತು ಉದ್ಯಾನವನದಲ್ಲಿ ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸುವ ಬಗ್ಗೆ.**

**ಟಿಪ್ಪಣಿ:–** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮಡಿಕೇರಿಯ ವ್ಯಾಪ್ತಿಯಲ್ಲಿ ಬರುವ ಅಂದಾಜು 5.00ಎಕರೆ ಜಮೀನಿನಲ್ಲಿ ಉದ್ಯಾನವನವನ್ನು ನಿರ್ಮಿಸಿ ಅಭಿವೃದ್ಧಿ ಪಡಿಸಲು ಮೆ॥ ಗ್ರೀಸ್ ಸ್ಪೇಸ್ ಲ್ಯಾಂಡ್ ಸ್ಕೇಪ್ಸ್, ಪ್ರೈ.ಲಿ., ಬೆಂಗಳೂರುರವರಿಗೆ ಪ್ರಾಧಿಕಾರದಿಂದ ಕಾರ್ಯದೇಶವನ್ನು ನೀಡಿರುವಂತೆ ಅಭಿವೃದ್ಧಿ ಪಡಿಸಲಾಗಿರುತ್ತದೆ ಹಾಗೂ ದಿನಾಂಕ:17.01.2013ರಲ್ಲಿ ನಡೆದ ಪ್ರಾಧಿಕಾರದ ಸಭಾ ನಿರ್ಣಯದಂತೆ ಯಾವುದೇ ಸಂಘ ಸಂಸ್ಥೆಯವರು ಉದ್ಯಾನವನವನ್ನು ವಾರ್ಷಿಕವಾಗಿ ನಿರ್ವಹಿಸಲು ಮುಂದೆ ಬರದ ಕಾರಣ ಮೆ॥ ಗ್ರೀಸ್ ಸ್ಪೇಸ್ ಲ್ಯಾಂಡ್‌ಸ್ಕೇಪ್ಸ್, ಪ್ರೈ.ಲಿ., ಬೆಂಗಳೂರುರವರಿಗೆ 2012–13 ಮತ್ತು 2013–14ನೇ ಸಾಲಿಗೆ ವಾರ್ಷಿಕವಾಗಿ ಉದ್ಯಾನವನವನ್ನು ನಿರ್ವಹಿಸಲು ಕಾರ್ಯಾದೇಶವನ್ನು ನೀಡಲಾಗಿತ್ತು. ಅದರಂತೆ ಉದ್ಯಾನವನವನ್ನು ನಿರ್ವಹಿಸುತ್ತಿದ್ದಾರೆ.

ಸದರಿ ಉದ್ಯಾನವನದ ಪೂರ್ಣ ಪ್ರದೇಶಕ್ಕೆ ಕೈಯಲ್ಲಿ ನೀರು ಹಾಕಿ ಪೂರೈಸುವುದು ಸಾಧ್ಯವಾಗದ ಕಾರಣ ತುಂತುರು/ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸುವುದು ಹಾಗೂ ಉದ್ಯಾನವನಕ್ಕೆ ಇನ್ನಷ್ಟು ಪ್ರವಾಸಿಗರು ಹಾಗೂ ಸ್ಥಳೀಯರನ್ನು ಆಕರ್ಷಿಸಲು

ಮಕ್ಕಳ ಆಟಿಕೆ ಸಾಮಾಗ್ರಿಗಳಾದ ಉಯ್ಯಾಲೆ, ಜಾರುಬಂಡಿ ಹಾಗೂ ಇನ್ನಿತರ ಮಕ್ಕಳ ಆಟಿಕೆಗಳನ್ನು ಉದ್ಯಾನವನದಲ್ಲಿ ಅಳವಡಿಸಿ, ಪ್ರವೇಶ ಶುಲ್ಕ ಕನಿಷ್ಟ ರೂ.5/–ರಂತೆ ವಿಧಿಸಿ ಸಾರ್ವಜನಿಕರಿಂದ ವಸೂಲಿ ಮಾಡಿದಲ್ಲಿ ಬರುವ ಆದಾಯದಿಂದ ಉದ್ಯಾನವನವನ್ನು ನಿರ್ವಹಿಸಲು ಅನುಕೂಲಕರವಾಗುವುದು. ಈ ಎಲ್ಲಾ ಅಂಶಗಳೊಂದಿಗೆ ಕಡತವನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಈಗಾಗಲೇ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ ಅಂದಾಜು 5.00ಎಕರೆ ಜಮೀನಿನಲ್ಲಿ ಉದ್ಯಾನವನವನ್ನು ಅಭಿವೃದ್ಧಿ ಪಡಿಸಿ, ವಾರ್ಷಿಕವಾಗಿ ನಿರ್ವಹಿಸುತ್ತಿರುವ ಬಗ್ಗೆ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯನವರು ಮತ್ತು ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಕೊಡಗು ಜಿಲ್ಲಾಧಿಕಾರಿಯವರು ತಮ್ಮ ಅಸಮಧಾನವನ್ನು ವ್ಯಕ್ತಪಡಿಸುತ್ತಾ ಉದ್ಯಾನವನವನ್ನು ಮೆ॥ ಗ್ರೀನ್‌ಸ್ಪೇಸ್ ಲ್ಯಾಂಡ್ ಸ್ಕೇಪ್ಸ್, ಇಂಡಿಯಾ ಪ್ರೈ.ಲಿ, ಬೆಂಗಳೂರುರವರು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲದ ಕಾರಣ ಅವರಿಗೆ ನೋಟೀಸ್ ಜಾರಿಮಾಡಿ ವಾರ್ಷಿಕವಾಗಿ ಗದ್ದಿಗೆಯನ್ನು ನಿರ್ವಹಿಸಲು ನೀಡಿರುವ ಅನುಮೋದನೆಯನ್ನು ರದ್ದುಪಡಿಸುವುದು ಸೂಕ್ತವೆಂದು ನಿರ್ದೇಶನ ನೀಡಿದರು.

ಈ ಬಗ್ಗೆ ಆಯುಕ್ತರು ಸದರಿ ಗದ್ದಿಗೆ ಉದ್ಯಾನವನವನ್ನು ಈಗಾಗಲೇ ಪರಿಶೀಲಿಸಿ, ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಕಂಡುಬಾರದ ಕಾರಣ ಸದರಿಯವರಿಗೆ ನೋಟೀಸು ಜಾರಿಮಾಡಿ ಈ ಬಗ್ಗೆ ಅವರ ಸಮಜಾಯಿಷಿಕೆಯನ್ನು ಕೋರಲಾಗಿದ್ದು, ಅವರ ವಿಳಾಸ ಬದಲಾವಣೆಯಿಂದ ನೋಟೀಸ್ ಸ್ವೀಕರಿಸದೆ ವಾಪಾಸು ಬಂದಿರುವುದಾಗಿ ಸಭೆಯಲ್ಲಿ ಮಾಹಿತಿ ನೀಡಿದರು ಹಾಗೂ ಅಭಿವೃದ್ಧಿ ಪಡಿಸಿರುವ ಉದ್ಯಾನವನವನ್ನು ನಿರ್ವಹಣೆಗಾಗಿ ನಗರಸಭೆಗೆ ಹಸ್ತಾಂತರಿಸುವಂತೆ ಸರ್ಕಾರದ ಆದೇಶವಿರುತ್ತದೆ ಎಂದು ಮಾಹಿತಿ ನೀಡಿದರು.

ಇದಕ್ಕೆ ಮಾನ್ಯ ಜಿಲ್ಲಾಧಿಕಾರಿಯವರು ಮೆ॥ ಗ್ರೀನ್ ಸ್ಪೇಸ್ ಲ್ಯಾಂಡ್ ಸ್ಕೇಪ್ಸ್, ಇಂಡಿಯಾ ಪ್ರೈ.ಲಿ, ಬೆಂಗಳೂರುರವರಿಗೆ ನೀಡಿರುವ ಕಾರ್ಯಾದೇಶವನ್ನು ರದ್ದುಪಡಿಸುವ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಕ್ರಮ ಕೈಗೊಳ್ಳುವಂತೆಯೂ ಸಭೆಯಲ್ಲಿ ಸೂಚಿಸಿದರು ಹಾಗೂ ಸದರಿ ಉದ್ಯಾನವನದ ಪೂರ್ಣ ಪ್ರದೇಶಕ್ಕೆ ಕೈಯಲ್ಲಿ ನೀರು ಹಾಕಿ ಪೂರೈಸುವುದು ಸಾಧ್ಯವಾಗದ ಕಾರಣ ತುಂತುರು/ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿ, ಹೆಚ್ಚಿನ ಅಲಂಕಾರಿಕ ಮತ್ತು ಹೂವಿನ ಗಿಡಗಳನ್ನು ಹಾಕಿ ಉದ್ಯಾನವನದ ಆಕರ್ಷಣೆಗಾಗಿ ಉಯ್ಯಾಲೆ, ಜಾರುಬಂಡಿ ಇನ್ನಿತರೆ ಮಕ್ಕಳ ಆಟಿಕೆ ಸಾಮಾಗ್ರಿಗಳನ್ನು ಅಳವಡಿಸಲು ಹಾಗೂ ಉದ್ಯಾನವನದಲ್ಲಿ ಕಾವಲುಗಾರರ ಕೊಠಡಿ, ಶೌಚಾಲಯ, ಉಪಹಾರ ಮಂದಿರ ಇವುಗಳನ್ನು ಸಹ ಅಳವಡಿಸಲು ಅಂದಾಜು 20.00ಲಕ್ಷ ಮೊಬಲಗನ್ನು ಪ್ರಾಧಿಕಾರದ ನಿಧಿಯಿಂದ ಉಪಯೋಗಿಸಿಕೊಂಡು ಅಭಿವೃದ್ಧಿ ಪಡಿಸಿ, ಸರ್ಕಾರದ ಆದೇಶದಂತೆ ಅಭಿವೃದ್ಧಿ ಪಡಿಸಿರುವ ಉದ್ಯಾನವನವನ್ನು ನಿರ್ವಹಣೆಗಾಗಿ ನಗರಸಭೆಗೆ ಹಸ್ತಾಂತರಿಸಿ, ನಗರಸಭೆ, ಮಡಿಕೇರಿಯವರು ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ಇದನ್ನು ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಸಿ.ನಾಣಯ್ಯನವರು ಒಪ್ಪಿ ಗದ್ದಿಗೆ ಉದ್ಯಾನವನಕ್ಕೆ ವ್ಯವಸ್ಥಿತವಾದ ರಸ್ತೆ ಮತ್ತು ವಾಹನ ನಿಲುಗಡೆಗಾಗಿ ಪಾರ್ಕಿಂಗ್ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ಅಳವಡಿಸುವಂತೆಯೂ ತಿಳಿಸಿದರು. ಸಭೆಯಲ್ಲಿ ನಗರಸಭಾ ಆಯುಕ್ತರ ಪರವಾಗಿ ಹಾಜರಿದ್ದ ಪರಿಸರ ಅಭಿಯಂತರರು ನಗರಸಭೆಯಲ್ಲಿ ಸಾಕಷ್ಟು ಕಾರ್ಮಿಕರ ಅಭಾವದಿಂದಾಗಿ ಉದ್ಯಾನವನವನ್ನು ನಿರ್ವಹಿಸುವುದು ಕಷ್ಟಸಾಧ್ಯವೆಂದು ತಿಳಿಸಿದರು. ಇದಕ್ಕೆ ಪ್ರತಿಯಾಗಿ ಸಭೆಯಲ್ಲಿ ಹಾಜರಿದ್ದ ಕೊಡಗು ಜಿಲ್ಲಾ ಅಪರ ಜಿಲ್ಲಾಧಿಕಾರಿಯವರು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿರುವ ಪೌರ ಕಾರ್ಮಿಕರಿಂದ ಉದ್ಯಾನವನವನ್ನು ನಿರ್ವಹಿಸಲು ಕಷ್ಟಸಾಧ್ಯವಾಗುವುದಿಲ್ಲವೆಂದು ತಿಳಿಸಿದರು, ಈ ಬಗ್ಗೆ ನಗರಸಭೆ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳಬಹುದೆಂದು ತಿಳಿಸಿ, ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕಾರ ನೀಡಿತು.

**4)ವಿಷಯ ಸಂಖ್ಯೆ 4 : ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಡಿಕೇರಿ ನಗರದೊಳಗೆ ನಾಮ ಫಲಕ (ಸೈನ್‌ಬೋರ್ಡ್) ಗಳನ್ನು ಅಳವಡಿಸುವ ಬಗ್ಗೆ.**

**ಟಿಪ್ಪಣಿ:–** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಡಿಕೇರಿ ನಗರದೊಳಗೆ ಮುಖ್ಯವಾಗಿ ಅವಶ್ಯಕತೆ ಇರುವ ಜಾಗಗಳಲ್ಲಿ ರಸ್ತೆಗಳು/ಪ್ರವಾಸಿತಾಣಗಳು/ದೇವಸ್ಥಾನಗಳು ಇನ್ನಿತರ ಮುಖ್ಯ ವಿಷಯಗಳ ಬಗ್ಗೆ ಪ್ರವಾಸಿಗರಿಗೆ ಸೂಕ್ತ ಮಾಹಿತಿಗಳನ್ನು ನೀಡಲು ಅಲ್ಲಲ್ಲಿ ನಾಮಫಲಕ (ಸೈನ್ ಬೋರ್ಡ್)ಗಳನ್ನು ಅಳವಡಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಮಡಿಕೇರಿ ನಗರಕ್ಕೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿರುವುದರಿಂದ ಅವಶ್ಯಕತೆ ಇರುವ ಜಾಗಗಳಲ್ಲಿ ರಸ್ತೆಗಳು ಪ್ರವಾಸಿ ತಾಣಗಳು/ದೇವಸ್ಥಾನಗಳು ಇನ್ನಿತರ ಮುಖ್ಯ ಜಾಗಗಳಲ್ಲಿ ನಾಮಫಲಕಗಳನ್ನು ಶಾಶ್ವತವಾಗಿ ಅಳವಡಿಸಲು ಹೆಚ್ಚಿನ ಆರ್ಥಿಕ ಹೊಣೆಯಾಗಿರುವುದರಿಂದ ಅಂದಾಜು 5.00ಲಕ್ಷ ಹಣವನ್ನು ಭರಿಸಲು ನಗರಾಭಿವೃದ್ಧಿ ಪ್ರಾಧಿಕಾರದಿಂದ ಆರ್ಥಿಕ ನೆರವು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಕೊಡಗು ಜಿಲ್ಲಾ ಆರಕ್ಷಕ ಅಧೀಕ್ಷಕರು ಕೋರಿದರು. ಇದಕ್ಕೆ ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**5)ವಿಷಯ ಸಂಖ್ಯೆ 5 : ಪ್ರಾಧಿಕಾರದಿಂದ ಠೇವಣಿ ಹಣವನ್ನು ವಿವಿಧ ಬ್ಯಾಂಕ್‌ಗಳಲ್ಲಿ ಹೂಡಿರುವ ಬಗ್ಗೆ.**

**ಟಿಪ್ಪಣಿ:** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿರುವ ಹೆಚ್ಚುವರಿ ಹಣವನ್ನು ವಿವಿಧ ಬ್ಯಾಂಕುಗಳಲ್ಲಿ ಠೇವಣಿ ಹೂಡಿರುವ ಬಗ್ಗೆ ವಿವರ ಈ ಕೆಳಕಂಡಂತಿರುತ್ತದೆ.

**ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿಯ 2012–13ನೇ ಸಾಲಿನ ಠೇವಣಿ ಹೂಡಿಕೆ**

**(Fixed Deposits) ವಿವರಗಳು.**

| ಕ್ರ.ಸ | ಠೇವಣಿ ಹೂಡಿಕೆ ದಿನಾಂಕ | ಹೂಡಿಕೆ ಮೊಬಲಗು | ಫಲಪ್ರದಗೊಳ್ಳುವ ದಿನಾಂಕ | ಫಲಪ್ರದಗೊಂಡಾಗ ಆಗುವ ಮೊಬಲಗು | ಠೇವಣಿ ಇಟ್ಟ ಬ್ಯಾಂಕು |
|---|---|---|---|---|---|
| 1 | 04.09.2012 | 12,44,584.00 | 04.09.2013 | 13,70,440.00 | ಚಿಕೋ ಬ್ಯಾಂಕು |
| 2 | 04.09.2012 | 11,55,457.00 | 04.09.2013 | 12,72,300.00 | ಚಿಕೋ ಬ್ಯಾಂಕು |
| 3 | 16.03.2013 | 11,01,123.00 | 16.03.2014 | 12,06,565.00 | ಚಿಕೋ ಬ್ಯಾಂಕು |
| 4 | 19.03.2013 | 5,96,337.00 | 17.03.2014 | 6,53,441.00 | ಚಿಕೋ ಬ್ಯಾಂಕು |
| 5 | 05.01.2013 | 17,83,501.00 | 05.01.2014 | 19,54,286.00 | ಚಿಕೋ ಬ್ಯಾಂಕು |
| **ಒಟ್ಟು** | | **58,81,002.00** | | **64,57,032.00** | |
| 6 | 26.09.2012 | 1,95,366.00 | 31.03.2014 | 2,24,600.00 | ಇಂಡಿಯನ್ ಬ್ಯಾಂಕು |
| 7 | 11.03.2013 | 11,15,945.00 | 11.03.2014 | 12,19,821.00 | ಕಾರ್ಪೋರೇಶನ್ ಬ್ಯಾಂಕು |
| **ಒಟ್ಟು** | | **71,92,313.00** | | **79,01,453.00** | |

ಈ ಮೇಲಿನ 3 ಬ್ಯಾಂಕುಗಳು ಸಹ ರಾಷ್ಟ್ರೀಕೃತ ಬ್ಯಾಂಕುಗಳಾಗಿರುವುದರಿಂದ ಇದನ್ನು ಇಲ್ಲಿಯೇ ಮುಂದುವರಿಸಬಹುದಾಗಿರುತ್ತದೆ. ಹಾಗೂ ಪ್ರಾಧಿಕಾರದ ಉಳಿತಾಯ ಖಾತೆಯು ಇಂಡಿಯನ್ ಬ್ಯಾಂಕಿನಲ್ಲಿದ್ದು ದೈನಂದಿನ ಜಮೆಗಳನ್ನು ಈ ಬ್ಯಾಂಕಿನಲ್ಲೇ ಜಮೆ ಮಾಡಲಾಗಿರುತ್ತದೆ. ಪ್ರಾಧಿಕಾರವು ವಸೂಲಿ ಮಾಡಿರುವ ಪಾರ್ಕ್ ಮತ್ತು ನಾಗರೀಕ ಸೇವಾ ಸೌಲಭ್ಯ ನಿವೇಶನದ ವಿನಾಯಿತಿ ಶುಲ್ಕವನ್ನು ಚಿಕೋ ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ ಹಾಗೂ ಉಳಿದಂತೆ ಪ್ರಾಧಿಕಾರವು ವಿಧಿಸುತ್ತಿರುವ ಕೆರೆ ಅಭಿವೃದ್ಧಿ ಶುಲ್ಕವನ್ನು ಹೆಚ್.ಡಿ.ಎಫ್.ಸಿ. ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಜಮೆ ಮಾಡಲಾಗಿದೆ. ಈ ಬ್ಯಾಂಕು ರಾಷ್ಟ್ರೀಕೃತವಾಗಿರುವುದಿಲ್ಲ. ಈ ಎಲ್ಲಾ ವಿವರಗಳನ್ನು ಸಭಾ ಮಾಹಿತಿಗಾಗಿ ಸಲ್ಲಿಸಲಾಗಿದೆ.

**ನಿರ್ಣಯ:–**ಈಗಾಗಲೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇಟ್ಟಿರುವ ಠೇವಣಿ ಹಣದ ಬಗ್ಗೆ ಪ್ರಾಧಿಕಾರವು ಒಪ್ಪಿ ಮುಂದಿನ ದಿನಗಳಲ್ಲಿ ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಹೂಡಲು ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಹೆಚ್.ಡಿ.ಎಫ್.ಸಿ. ಬ್ಯಾಂಕು ರಾಷ್ಟ್ರೀಕೃತ ಬ್ಯಾಂಕ್ ಎನ್ನುವುದರ ಬಗ್ಗೆ ವ್ಯವಸ್ಥಾಪಕರು, ಹೆಚ್.ಡಿ.ಎಫ್.ಸಿ. ಬ್ಯಾಂಕು ಮಡಿಕೇರಿರವರನ್ನು ಸಂಪರ್ಕಿಸಿ, ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>6)ವಿಷಯ ಸಂಖ್ಯೆ 6</u> :–ಮಡಿಕೇರಿ ನಗರಸಭಾ ಬ್ಲಾಕ್ ನಂ.23ರ ಸರ್ವೆ ನಂ.40/3 ರಲ್ಲಿರುವ ನಿವೇಶನದಲ್ಲಿ ರೆಸ್ಟೋರೆಂಟ್ ಕಟ್ಟಡವನ್ನು ನಿರ್ಮಿಸಲು ನಗರಸಭೆಯಿಂದ ಸ್ವೀಕರಿಸಿರುವ ಶ್ರೀ ಜನಾಬ್ ಶೀಬಾನ್ ನಿಜಾಮ್‌ರವರ ಕಡತಕ್ಕೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ–ಮೈಸೂರು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತದೆ. ಅರ್ಜಿದಾರರು ವಸತಿ ವಲಯದಲ್ಲಿ ರೆಸ್ಟೋರೆಂಟ್ ಕಟ್ಟಡವನ್ನು ನಿರ್ಮಿಸಲು ಅನುಮತಿಯನ್ನು ಕೋರಿರುವುದಾಗಿದೆ.

**ನಗರಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗದ ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ, ಸದರಿ ಜಾಗವು ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಮೈಸೂರು–ಮಡಿಕೇರಿ ರಾಜ್ಯ ಹೆದ್ದಾರಿಯಿಂದ ಸಂಪರ್ಕವನ್ನು ಹೊಂದಿರುತ್ತದೆ. ನಗರಸಭಾ ಫಾರಂ ನಂ.3ರಂತೆ ನಿವೇಶನದ ಒಟ್ಟು ವಿಸ್ತೀರ್ಣ 0.72½ಎಕರೆ (2935.13ಚ.ಮೀ) ಇದ್ದು, ವಸತಿ ವಲಯದಲ್ಲಿ ರೆಸ್ಟೋರೆಂಟ್ ಕಟ್ಟಡವನ್ನು ನಿರ್ಮಿಸಲು ಸರ್ಕಾರದಿಂದ ಅನುಮೋದನೆಯಾಗಿರುವ ವಲಯನಿಯಾಮಾವಳಿಗಳನ್ವಯ ವಿಶೇಷ ಸಂದರ್ಭದಲ್ಲಿ ತಾಂತ್ರಿಕ ಅಭಿಪ್ರಾಯವನ್ನು ನೀಡಲು ಅವಕಾಶವಿರುವುದರಿಂದ ಸದರಿ ವಿಷಯವನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**<u>ನಿರ್ಣಯ:–</u>** ಮಡಿಕೇರಿ ನಗರಸಭಾ ಬ್ಲಾಕ್ ನಂ.23ರ, ಸರ್ವೆ ನಂ.40/3 ರಲ್ಲಿರುವ 0.72½ಎಕರೆ ನಿವೇಶನದಲ್ಲಿ ಶ್ರೀ ಜನಾಬ್ ಶಿಬಾನ್ ನಿಜಾಮ್‌ರವರಿಗೆ ವಸತಿ ಕಟ್ಟಡ ನಿರ್ಮಿಸಲು ಈಗಾಗಲೇ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ನಿವೇಶನದಲ್ಲಿನ ಉಳಿಕೆ ಜಾಗದಲ್ಲಿ ವಿಶೇಷ ಸಂಧರ್ಭದಲ್ಲಿ ಪ್ರಾಧಿಕಾರದ ಸಭೆಯು ಅನುಮೋದನೆ ನೀಡಿದಲ್ಲಿ ರೆಸ್ಟೋರೆಂಟ್ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡಲು ಅವಕಾಶವಿರುತ್ತದೆ ಎಂದು ಸಭೆಯಲ್ಲಿ ಆಯುಕ್ತರು ತಿಳಿಸಿದರು. ಇದಕ್ಕೆ ಮಾನ್ಯ ಶ್ರೀ ಎಂ.ಸಿ.ನಾಣಯ್ಯನವರು ಪ್ರತಿಕ್ರಿಯಿಸುತ್ತಾ ವಸತಿ ಕಟ್ಟಡವೆಂದು ಅನುಮತಿ ಪಡೆದು ಅರ್ಜಿದಾರರು ಹೋಂಸ್ಟೇ ಯನ್ನು ನಡೆಸಲು ಉದ್ದೇಶಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ವಸತಿ ವಲಯದಲ್ಲಿ ವಾಣಿಜ್ಯ ಉದ್ದೇಶದ ರೆಸ್ಟೋರೆಂಟ್ ನಿರ್ಮಿಸಲು ಅವಕಾಶ ನೀಡಬಾರದೆಂದು ತಿಳಿಸಿದರು. ಇದನ್ನು ಮಾನ್ಯ ಜಿಲ್ಲಾಧಿಕಾರಿಯವರು ಒಪ್ಪಿ ಭೂ ಮಾಲೀಕರು ಕಾನೂನು ಬಾಹಿರವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದಲ್ಲಿ ಅವರಿಗೆ ನೋಟೀಸು ಜಾರಿ ಮಾಡಿ ಸಮಜಾಯಿಷಿಕೆಯನ್ನು ಕೋರುವಂತೆ ಸಭೆಯಲ್ಲಿ ತಿಳಿಸಿದರು.

ಇದನ್ನು ಸಭೆಯು ಒಪ್ಪಿ ಮಾನ್ಯ ಜಿಲ್ಲಾಧಿಕಾರಿರವರ ನಿರ್ದೇಶನದಂತೆ ಕ್ರಮ ಕೈಗೊಳ್ಳಬಹುದೆಂದು ಹಾಗೂ ರೆಸ್ಟೋರೆಂಟ್ ನಿರ್ಮಿಸಲು ತಾಂತ್ರಿಕ ಅಭಿಪ್ರಾಯ ನೀಡದಂತೆ ಸರ್ವಾನುಮತದ ಅಂಗೀಕಾರ ನೀಡಿತು.

**<u>7) ವಿಷಯಸಂಖ್ಯೆ 7</u> :–ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಳವಡಿಸಿರುವ ವೆಬ್‌ಸೈಟ್‌ನ್ನು ನವೀಕರಿಸುವ ಬಗ್ಗೆ.**

**ಟಿಪ್ಪಣಿ:–** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯವೈಖರಿಗಳನ್ನು ಗಣಕೀಕೃತಗೊಳಿಸಿ ವೆಬ್‌ಸೈಟಿನಲ್ಲಿ ಅಳವಡಿಸಿ ವಾರ್ಷಿಕವಾಗಿ ನಿರ್ವಹಿಸಲು ಮೆ॥ಪ್ರೀಮಿಯರ್ ಟೆಕ್ನಾಲಜೀಸ್, ಸಾಫ್ಟ್‌ವೇರ್ ಡೆವಲಪ್‌ಮೆಂಟ್ & ವೆಬ್ ಡಿಸೈನಿಂಗ್ ಮಂಗಳೂರುರವರಿಗೆ ಈ ಕಚೇರಿಯಿಂದ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಅದರಂತೆ ಸದರಿಯವರು ಪ್ರಾಧಿಕಾರದ ಮಾಹಿತಿಗಳನ್ನು ವೆಬ್‌ಸೈಟಿನಲ್ಲಿ ಅಳವಡಿಸಿ ವಾರ್ಷಿಕವಾಗಿ ನಿರ್ವಹಿಸುತ್ತಿದ್ದಾರೆ. ಸದರಿಯವರಿಗೆ ವೆಬ್‌ಸೈಟ್ ಅಳವಡಿಸಲು ವಾರ್ಷಿಕವಾಗಿ ರೂ.5,000/– ಮತ್ತು ಕಚೇರಿಗೆ ಸಂಬಂಧಿಸಿದ ಮಾಹಿತಿಗಳನ್ನು ವೆಬ್‌ಸೈಟಿನಲ್ಲಿ ಹಾಕಿ ನಿರ್ವಹಿಸಲು ವಾರ್ಷಿಕವಾಗಿ ರೂ. 7,500/–ಗಳನ್ನು ಪ್ರಾಧಿಕಾರದ ವತಿಯಿಂದ ಪಾವತಿಸಲಾಗಿರುತ್ತದೆ ಇದಕ್ಕೆ ಘಟನೋತ್ತರ ಮಂಜೂರಾತಿಗಾಗಿ ಸಭೆಯಲ್ಲಿ ಸಲ್ಲಿಸಲಾಗಿದೆ.

**<u>ನಿರ್ಣಯ:–</u>**ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>8) ವಿಷಯಸಂಖ್ಯೆ 8</u>:–ಪ್ರಾಧಿಕಾರಕ್ಕೆ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿರುವ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ'ಗ್ರೂಪ್ ನೌಕರರುಗಳನ್ನು ಪ್ರಾಧಿಕಾರದಲ್ಲಿ ಮುಂದುವರೆಸುವ ಮತ್ತು ವೇತನವನ್ನು ಪರಿಷ್ಕರಿಸುವ ಬಗ್ಗೆ.**

**<u>ಟಿಪ್ಪಣಿ:–</u>**ಈ ಪ್ರಾಧಿಕಾರಕ್ಕೆ ಈಗಾಗಲೇ ಹೊರಗುತ್ತಿಗೆ ಆಧಾರದಲ್ಲಿ ಮೆ॥ಒಶಿಯನ್ ಸೆಕ್ಯುರಿಟಿ, ವಿರಾಜಪೇಟೆರವರಿಂದ ಒಂದು ಕಂಪ್ಯೂಟರ್ ಆಪರೇಟರ್ ಮತ್ತು ಒಂದು 'ಡಿ' ಗ್ರೂಪ್ ನೌಕರರುಗಳನ್ನು ಕನಿಷ್ಟ ವೇತನ ರೂ. 5200/– ಮತ್ತು ರೂ.4800/–ಗಳ

ಆಧಾರದಲ್ಲಿ ನೇಮಿಸಿಕೊಂಡು ಕಚೇರಿಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದಾಗಿದೆ. ಸದರಿ ಹುದ್ದೆಗಳು ಪ್ರಾಧಿಕಾರಕ್ಕೆ ಅತ್ಯಾವಶ್ಯಕವಾಗಿದ್ದು, ಇವರುಗಳ ಸೇವೆಯನ್ನು ಪ್ರಾಧಿಕಾರದಲ್ಲಿ ಮುಂದುವರೆಸುತ್ತಾ ಇವರಿಗೆ ಕಾನೂನು ರೀತ್ಯಾ ವೇತನ, ಪ್ರಾವಿಡೆಂಟ್ ಫಂಡ್, ಡಿ.ಎ, ಸರ್ವಿಸ್ ಟ್ಯಾಕ್ಸ್ ಮತ್ತು ಸರ್ವಿಸ್ ಕಮಿಷನ್ ಇವುಗಳೆಲ್ಲ ಸೇರಿ ಆಗುವ ಒಟ್ಟು ವೇತನವನ್ನು ಪ್ರಾಧಿಕಾರದ ನಿಧಿಯಿಂದ ಪಾವತಿಸಲು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**<u>ನಿರ್ಣಯ:- </u>** ಪ್ರಾಧಿಕಾರಕ್ಕೆ ಆಯುಕ್ತರು ಮತ್ತು ನಗರಯೋಜನಾ ಸದಸ್ಯರು ಈ ಎರಡು ಹುದ್ದೆಗಳನ್ನು ಹೊರತುಪಡಿಸಿದಲ್ಲಿ ಸರ್ಕಾರದಿಂದ ಯಾವುದೇ ಸಿಬ್ಬಂಧಿ ವರ್ಗದ ಹುದ್ದೆಗಳನ್ನು ಖಾಯಂ ಆಗಿ ಸೃಷ್ಟಿಸಿ, ಮಂಜೂರು ಮಾಡಿರುವುದಿಲ್ಲವೆಂದು ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಒಂದು ಕಂಪ್ಯೂಟರ್ ಆಪರೇಟರ್ ಮತ್ತು ಒಂದು 'ಡಿ'ಗ್ರೂಪ್ ನೌಕರುಗಳನ್ನು ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಕನಿಷ್ಟ ವೇತನ ಪಾವತಿಸಲಾಗುತ್ತಿದೆ ಎಂದು ಸದರಿ ಹುದ್ದೆಗಳು ಪ್ರಾಧಿಕಾರಕ್ಕೆ ಅತ್ಯಾವಶ್ಯಕವಾಗಿರುವುದರಿಂದ ಇವರ ಸೇವೆಯನ್ನು ಪ್ರಾಧಿಕಾರದಲ್ಲಿ ಮುಂದುವರೆಸುತ್ತಾ, ಇವರಿಗೆ ಕಾನೂನು ರೀತ್ಯಾ ವೇತನ, ಪ್ರಾವಿಡೆಂಟ್ ಫಂಡ್, ಡಿ.ಎ, ಸರ್ವಿಸ್ ಟ್ಯಾಕ್ಸ್ ಮತ್ತು ಸರ್ವಿಸ್ ಕಮಿಷನ್ ಇವುಗಳೆಲ್ಲ ಸೇರಿ ಆಗುವ ಒಟ್ಟು ವೇತನ ಕ್ರಮವಾಗಿ ರೂ.7,601/- ಮತ್ತು 7,371/- ಪಾವತಿಸಬಹುದೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಯವರು ಪ್ರಾಧಿಕಾರಕ್ಕೆ ಅವಶ್ಯಕತೆ ಇರುವ ಹುದ್ದೆಗಳನ್ನು ಸೃಷ್ಟಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಯವರ ಮುಖಾಂತರ ಸಲ್ಲಿಸಲು ಕ್ರಮ ಕೈಗೊಳ್ಳುವಂತೆಯೂ ಹಾಗೂ ಸದರಿ ಹುದ್ದೆಗಳನ್ನು ಮುಂದುವರೆಸುತ್ತಾ ವೇತನವನ್ನು ಪಾವತಿಸಲು ಕ್ರಮ ಕೈಗೊಳ್ಳಬಹುದೆಂದು ಸೂಚಿಸಿದರು. ಇದಕ್ಕೆ ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**<u>9) ವಿಷಯಸಂಖ್ಯೆ 9:- ಪ್ರಾಧಿಕಾರದ ಕಚೇರಿ ಕಟ್ಟಡದ ಬಗ್ಗೆ.</u>**

**<u>ಟಿಪ್ಪಣಿ:-</u>** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಕಟ್ಟಡವು ಕರ್ನಾಟಕ ಸಾರಿಗೆ ಆಯುಕ್ತರಿಗೆ ಸೇರಿದ ಹಿಂದಿನ ವೇ ಬ್ರಿಡ್ಜ್ ಬಿಲ್ಡಿಂಗ್‌ನಲ್ಲಿ ಅವರ ಅನುಮತಿಯೊಂದಿಗೆ ದುರಸ್ಥಿ ಪಡಿಸಿಕೊಂಡು ಮಾಸಿಕ ಕನಿಷ್ಟ ಬಾಡಿಕೆ ರೂ. 100/-ನ್ನು ಪಾವತಿಸುವ ಷರತ್ತಿನೊಂದಿಗೆ 1991ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿರುವುದಾಗಿದೆ. ಈ ಕಚೇರಿಗೆ ಯಾವುದೇ ಸ್ವಂತ ನಿವೇಶನ ಇರುವುದಿಲ್ಲವಾದ್ದರಿಂದ ಜಿಲ್ಲಾ ಆಡಳಿತ ಕಚೇರಿ ಸಂಕೀರ್ಣದಲ್ಲಿ ಅಂದಾಜು 2000ಚ.ಅಡಿ ಜಾಗವನ್ನು ಮಾನ್ಯ ಜಿಲ್ಲಾಧಿಕಾರಿಯವರಿಂದ ಮಂಜೂರು ಮಾಡಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಲಾಗಿದೆ.

**<u>ನಿರ್ಣಯ:-</u>** ಈಗಾಗಲೇ ನಿರ್ಮಾಣ ಹಂತದಲ್ಲಿರುವ ಜಿಲ್ಲಾ ಆಡಳಿತ ಕಚೇರಿ ಸಂಕೀರ್ಣದಲ್ಲಿ ಹಲವಾರು ಸರ್ಕಾರಿ ಕಚೇರಿಗಳಿಗೆ ಸ್ಥಳಾವಕಾಶ ಕಲ್ಪಿಸಿರುವುದರಿಂದ ಪ್ರಾಧಿಕಾರಕ್ಕೆ ಅಗತ್ಯವಿರುವ ಕಚೇರಿ ಮತ್ತು ಸಭಾಂಗಣಕ್ಕೆ ತಕ್ಕಂತೆ ಸ್ಥಳ ಲಭ್ಯವಿರುವುದಿಲ್ಲವೆಂದು ಸಭೆಯಲ್ಲಿ ವಿಶೇಷ ಆಹ್ವಾನಿತರಾದ ಕೊಡಗು ಜಿಲ್ಲಾ ಅಪರ ಜಿಲ್ಲಾಧಿಕಾರಿಯವರು ಮಾಹಿತಿ ನೀಡಿದರು. ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಯವರು ಉದ್ದೇಶಿತ ಮತ್ತೊಂದು ಜಿಲ್ಲಾಡಳಿತ ಕಚೇರಿ ಸಂಕೀರ್ಣದಲ್ಲಿ ಪ್ರಾಧಿಕಾರದ ಕಚೇರಿ ಕಟ್ಟಡಕ್ಕೆ ಅವಶ್ಯವಿರುವಂತೆ ಅಂದಾಜು 2000ಚ.ಅಡಿ ಜಾಗವನ್ನು ಕಾದಿರಿಸಲು ಕ್ರಮ ಕೈಗೊಳ್ಳಲಾಗುವುದೆಂದು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಪ್ರಾಧಿಕಾರದ ನಿಧಿಯಿಂದ ಪಾವತಿಸಿ ಕಚೇರಿಯ ಕಟ್ಟಡವನ್ನು ಪಡೆಯುವಂತೆ ತಿಳಿಸಿದರು. ಇದಕ್ಕೆ ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**10) ವಿಷಯಸಂಖ್ಯೆ 10:-ಖಾತೆ ವರ್ಗಾವಣೆ ಮಾಡಲು ಭೂ ಮಾಲೀಕರು ಭೂ ವಿಭಜನಾ ಪತ್ರ ಕೋರಿ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ.**

**ಟಿಪ್ಪಣಿ:-**ಮಡಿಕೇರಿ ನಗರಸಭೆಯಲ್ಲಿ ಈಗಾಗಲೇ ಖಾತೆಯನ್ನು ಹೊಂದಿದ್ದು ಸದರಿ ಖಾತೆಯಿಂದ ನಿವೇಶನಗಳನ್ನು ದಾನ ಪತ್ರ/ವಿಭಜನೆ ಪತ್ರದ ಮೂಲಕ ಮಾರಾಟ ಮಾಡಿ ಖರೀದಿದಾರರ ಹೆಸರಿಗೆ ನಗರಸಭೆಯಲ್ಲಿ ಖಾತೆ ವರ್ಗಾವಣೆ ಮಾಡಲು ಈ ಪ್ರಾಧಿಕಾರದಿಂದ ಭೂ ವಿಭಜನೆ ನಕ್ಷೆಯನ್ನು ಅನುಮೋದಿಸಿಕೊಡಲು ಕೋರಲಾಗುತ್ತಿದೆ. ಭೂ ವಿಭಜನೆ ಮಾಡಿ ವಿನ್ಯಾಸ ನಕ್ಷೆ ಅನುಮೋದಿಸುವ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/162/ಬೆಂರೂಪ್ರಾ/2011, ದಿನಾಂಕ:14.09.2012ರನ್ವಯ 4000ಚ.ಮೀ ಮತ್ತು ಅದಕ್ಕಿಂತ ಕಡಿಮೆ ಇರುವ ಜಾಗಕ್ಕೆ ಕನಿಷ್ಟ ಶೇ.15ರಷ್ಟು ಜಾಗವನ್ನು ಉದ್ಯಾನವನಕ್ಕೆಂದು ಕಾಯ್ದಿರಿಸಲು ಸೂಚಿಸಲಾಗಿದೆ. ಈಗಾಗಲೇ ನಗರಸಭೆಯಿಂದ ಖಾತೆ ಇರುವ ಪ್ರಕರಣಗಳಿಗೆ, ಸರ್ಕಾರದ ಸುತ್ತೋಲೆಯನ್ವಯ ಕ್ರಮಕೈಗೊಳ್ಳುವುದು ಕಷ್ಟಸಾಧ್ಯವಾಗಿರುವುದರಿಂದ, ಈ ಕಚೇರಿಯಲ್ಲಿ ಪರಿಶೀಲಿಸಿ ನಗರಸಭೆಯಿಂದಲೇ ಕ್ರಮಕೈಗೊಳ್ಳಲು ತಿಳಿಸುವ ಕುರಿತು, ಸಭೆಯಲ್ಲಿ ಚರ್ಚಿಸಲು ಮಂಡಿಸಲಾಗಿದೆ.

**<u>ನಿರ್ಣಯ:–</u>**ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಮಡಿಕೇರಿ ನಗರದಲ್ಲಿ ಬರುವ ಕೆಲವೊಂದು ವಸತಿ ವಿನ್ಯಾಸಗಳಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸದಂತೆ ಭೂ ಮಾಲೀಕರು ನಿವೇಶನಗಳನ್ನು ಮಾರಾಟ ಮಾಡದೆ ಪ್ರತ್ಯೇಕವಾಗಿ ಭೂ ಮಾಲೀಕರೆ ರೂಪಿಸಿಕೊಂಡ ವಿನ್ಯಾಸದಂತೆ ನಿವೇಶನಗಳನ್ನು ಮಾರಾಟ ಮಾಡಿ ಅದರಂತೆ ನಗರಸಭೆಯಲ್ಲಿ ಖಾತೆಯಾಗಿ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ಪಡೆದು ವಸತಿ ಕಟ್ಟಡವನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ ಹಾಗೂ ಪ್ರಾಧಿಕಾರದ ಗಮನಕ್ಕೆ ಬಂದಂತೆ ಶ್ರೀ ಎನ್.ಎನ್.ಕುಟ್ಟಪ್ಪ, ರಾಣಿಪೇಟೆ, ಮಡಿಕೇರಿರವರು ಉದ್ಯಾನವನಕ್ಕೆಂದು ಕಾದಿರಿಸಿರುವ ನಿವೇಶನವನ್ನು ಸಹ ಮಾರಾಟ ಮಾಡಿ ನಗರಸಭೆಯಲ್ಲಿ ಖಾತೆಯಾಗಿರುವುದು ಸಹ ಕಂಡುಬಂದಿರುತ್ತದೆ. ಇದು ಅನುಮೋದಿತ ವಿನ್ಯಾಸಕ್ಕೆ ವ್ಯತಿರಿಕ್ತವಾಗಿ ಅಡ್ಡಾದಿಡ್ಡಿ ಬೆಳವಣಿಗೆಗೆ ಆಸ್ಪದ ಮಾಡಿಕೊಟ್ಟಂತಾಗಿರುತ್ತದೆ ಎಂದು ಈ ಬಗ್ಗೆ ಪ್ರಾಧಿಕಾರ/ನಗರಸಭೆಯು ಪರಿಶೀಲಿಸಿ, ಕ್ರಮ ಕೈಗೊಳ್ಳಬೇಕಾಗಿರುವುದು ಎಂದು ವಿಧಾನ ಪರಿಷತ್ ಸದ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯನವರು ತಿಳಿಸಿದರು. ಈ ರೀತಿ ಬೆಳವಣಿಗೆಗಳಿಗೆ ಮಾನ್ಯ ಜಿಲ್ಲಾಧಿಕಾರಿಯವರು ಅಸಮದಾನ ವ್ಯಕ್ತಪಡಿಸಿ, ಸಂಬಂಧಪಟ್ಟ ಭೂ ಮಾಲೀಕರಿಗೆ ನೋಟೀಸು ನೀಡಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು ಸೂಕ್ತವಾಗಿರುತ್ತದೆ ಎಂದು ಸಭೆಯಲ್ಲಿ ಸೂಚಿಸಿದರು. ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಹಿತದೃಷ್ಟಿಯಿಂದ ಈಗಾಗಲೇ ನಗರಸಭೆಯಲ್ಲಿ ಖಾತೆ ಇದ್ದು, ಅಭಿವೃದ್ಧಿ ಹೊಂದಿದ ಪ್ರದೇಶವಾಗಿದ್ದು, ಅಲ್ಲಲ್ಲಿ ಕಟ್ಟಡಗಳು ಬಂದಿದ್ದಲ್ಲಿ ಭೂ ವಿಭಜನೆ ಮಾಡಲು ಸರ್ಕಾರದ ಆದೇಶದನ್ವಯ ಉದ್ಯಾನವನಕ್ಕೆಂದು ಜಾಗ ಕಾದಿರಿಸಲು ಕಷ್ಟಸಾಧ್ಯವಾಗುವುದರಿಂದ ಅರ್ಜಿದಾರರು ಸಲ್ಲಿಸುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಿ, ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಬರುವಂತಹ ನಿವೇಶನಗಳಿಗೆ ಭೂ ವಿಭಜನೆ ಮಾಡಿ ಖಾತೆ ವರ್ಗಾವಣೆ ಮಾಡಲು ನಗರಸಭೆಯಲ್ಲಿಯೇ ಕ್ರಮ ಕೈಗೊಳ್ಳಬಹುದೆಂದು ಉಳಿದಂತೆ ನಗರಸಭೆಯಲ್ಲಿ ಖಾತೆ ಇದ್ದು, ಖಾಲಿ ನಿವೇಶನಗಳಾಗಿದ್ದ ಪಕ್ಷದಲ್ಲಿ ಪ್ರಾಧಿಕಾರದಿಂದ ನಿಯಾಮಾನುಸಾರ ಭೂ ವಿಭಜನೆ ಮಾಡಿ ತಾಂತ್ರಿಕ ಅನುಮೋದನೆಯನ್ನು ನೀಡುವುದು ಹಾಗೂ ಭೂ ಪರಿವರ್ತನೆಯಾಗಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವಿನ್ಯಾಸ ಅನುಮೋದನೆಗೆ ಸಲ್ಲಿಸುವಂತಹ ಪ್ರಕರಣಗಳಿಗೆ ಸರ್ಕಾರದ ಸುತ್ತೋಲೆಯನ್ವಯ ನಿಯಾಮಾನುಸಾರ ಜಾಗಗಳನ್ನು ಕಾದಿರಿಸಿ, ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆಯನ್ನು ನೀಡಬಹುದೆಂದು ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ವಿವರಿಸಿದರು. ಸಾರ್ವಜನಿಕರಿಗೆ ಅನುಕೂಲ ಮಾಡುವ ಹಿತದೃಷ್ಟಿಯಿಂದ ಆಯುಕ್ತರು ವಿವರಿಸಿರುವ ಅಂಶಗಳನ್ನು ಪರಿಗಣಿಸಿ ಅದರಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಯವರು ತಿಳಿಸಿರುವುದನ್ನು ಸಭೆರಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**11) ವಿಷಯಸಂಖ್ಯೆ 11:–ಮಡಿಕೇರಿ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–1ನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುವ ಬಗ್ಗೆ.**

**ಟಿಪ್ಪಣಿ:–** ಮಡಿಕೇರಿ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–1ನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ದಿನಾಂಕ:11.02.2013ರಲ್ಲಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರಿಗೆ ಸಲ್ಲಿಸಲಾಗಿತ್ತು. ಸದರಿ ಕಡತಕ್ಕೆ ಸಂಬಂಧಪಟ್ಟಂತೆ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಇಲಾಖೆ, ಬೆಂಗಳೂರು ಇವರ ದಿನಾಂಕ:07.11.2013ರ ಪತ್ರದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಸೂಚನೆ ಮೇರೆಗೆ ಮಹಾಯೋಜನೆಗೆ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಿರುವ ಅರ್ಜಿದಾರರ ಅಭಿಪ್ರಾಯ/ಸಲಹೆಗಳನ್ನು ಪುನರ್ ಪರಿಶೀಲಿಸಿ, ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭಾ ನಿರ್ಣಯದೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಈ ಬಗ್ಗೆ ಪ್ರಸ್ತಾವನೆಯನ್ನು ಸಭಾ ತೀರ್ಮಾನಕ್ಕಾಗಿ ಸಲ್ಲಿಸಲಾಗಿದೆ.

**<u>ನಿರ್ಣಯ:–</u>**ಈ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಈಗಾಗಲೇ ಪ್ರಾಧಿಕಾರದಲ್ಲಿ ಮಹಾಯೋಜನೆ ಪರಿಷ್ಕೃತ–1 (ಅಂತಿಮ)ವನ್ನು ಸಿದ್ದಪಡಿಸುವ ಮೊದಲು 60 ದಿವಸಗಳ ಕಾಲಾವಕಾಶಗಳನ್ನು ನೀಡಿ ಸಾರ್ವಜನಿಕರಿಂದ ಸ್ವೀಕರಿಸಿರುವ ಸಲಹೆ ಸೂಚನೆಗಳ 270ಅರ್ಜಿಗಳ ಪೈಕಿ ಕೆಲವು ಸಂಘಸಂಸ್ಥೆಗಳು ಮತ್ತು ಪ್ರಮುಖ ವ್ಯಕ್ತಿಗಳು ನೀಡಿರುವ ಆಕ್ಷೇಪಣೆಗಳು ಸಮಂಜಸವಾಗಿದ್ದು, ಮಡಿಕೇರಿ ನಗರದ ಬೆಟ್ಟಗುಟ್ಟಗಳನ್ನು, ಗಿರಿಕಂದರಗಳನ್ನು ಪ್ರಕೃತಿ ಸೌಂದರ್ಯಗಳನ್ನು ಹಾಗೂ ರೈನ್ ಕ್ಯಾಚ್‌ಮೆಂಟ್ ಪ್ರದೇಶಗಳನ್ನು ಯಥಾ ಸ್ಥಿತಿಯಲ್ಲಿ ಉಳಿಸಿಕೊಳ್ಳಲು ನೀಡಿರುವ ಆಕ್ಷೇಪಣೆಗಳನ್ನು ಸಭೆಯಲ್ಲಿ ಗಂಭೀರವಾಗಿ ಪರಿಗಣಿಸದೆ, ಕೊಡಗು ಜಿಲ್ಲೆಯು ಒಂದು ಪ್ರವಾಸಿ ತಾಣವಾಗಿದ್ದು, ಪ್ರವಾಸಿಗರಿಗೆ ಊಟ ವಸತಿ ನೀಡುವ ಉದ್ದೇಶವನ್ನು ಮಾತ್ರ ಗಮನದಲ್ಲಿ ಇಟ್ಟುಕೊಂಡು ಮಡಿಕೇರಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೃಷಿ ಜಮೀನುಗಳಲ್ಲಿ ರೆಸಾರ್ಟ್ ನಿರ್ಮಿಸಲು ವಾಣಿಜ್ಯ ಉದ್ದೇಶಕ್ಕೆಂದು ಜಾಗ ಕಾದಿರಿಸುವುದು/ಭೂ

ಪರಿವರ್ತನೆ ಮಾಡುವುದು ಎಷ್ಟು ಸಮಂಜಸವೆಂದು ಸಭೆಯಲ್ಲಿ ವಿಧಾನ ಪರಿಷತ್‌ನ ಸದಸ್ಯರಾದ ಮಾನ್ಯ ಶ್ರೀ ಎಂ.ಸಿ.ನಾಣಯ್ಯನವರು ಪ್ರಶ್ನಿಸಿದರು. ಇದಕ್ಕೆ ಮಾನ್ಯ ಜಿಲ್ಲಾಧಿಕಾರಿಯವರು ಪ್ರತಿಕ್ರಿಯಿಸುತ್ತಾ ಕೃಷಿ ಉಪಯೋಗದ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಅವಕಾಶವಿದ್ದು, ಸಾಮಾನ್ಯ ಜನರ ಹಿತದೃಷ್ಟಿಯಿಂದ ಸರ್ಕಾರದ ಆದೇಶದನ್ವಯ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತಿಸಲು ಅವಕಾಶವಿರುವುದನ್ನು ಉಪಯೋಗಿಸಿಕೊಂಡು ಭೂ ಪರಿವರ್ತನೆ ಮಾಡುತ್ತಿರುವುದಾಗಿರುತ್ತದೆ. ಭೂ ಪರಿವರ್ತನೆ ಮಾಡುವ ಸಂಧರ್ಭದಲ್ಲಿ ನೀರಿನ ಸೆಳೆ ಇರುವ ಪ್ರದೇಶ ಅರಣ್ಯ ಪ್ರದೇಶಗಳು ಹೈಟೆನಕ್ಷನ್ ವೈಯರ್ ಇರುವ ಪ್ರದೇಶಗಳು, ಬೆಟ್ಟಗುಡ್ಡಗಳಿರುವ ಪ್ರದೇಶಗಳನ್ನು ಹೊರತುಪಡಿಸಿ ಉಳಿದಂತೆ ಭೂ ಪರಿವರ್ತನೆಗೆ ಯೋಗ್ಯವಾಗಿರುವುಂತಹ ಪ್ರದೇಶಗಳನ್ನು ಮಾತ್ರ ಕಾನೂನಿನನ್ವಯ ಭೂ ಪರಿವರ್ತನೆ ಮಾಡುವುದಾಗಿರುತ್ತದೆ ಎಂದು ಮಾಹಿತಿಯನ್ನು ನೀಡಿದರು. ಇದನ್ನು ಮುಂದುವರಿಸುತ್ತಾ ಸಭೆಯಲ್ಲಿ ಹಾಜರಿದ್ದ ಅಪರ ಜಿಲ್ಲಾಧಿಕಾರಿಯವರು ಭೂ ಪರಿವರ್ತಿಸಲು ಅನುಮತಿ ನೀಡುವ ಸಂಧರ್ಭದಲ್ಲಿ ಭೂ ಮಾಲೀಕರಿಗೆ ಕೆಲವು ಷಂತ್ತುಗಳನ್ನು ವಿಧಿಸಿ 2ವರ್ಷದ ಕಾಲಾವಕಾಶವನ್ನು ನೀಡಿ, ಆ ಅವಧಿಯಲ್ಲಿ ಭೂ ಮಾಲೀಕರು ಸಂಬಂಧಪಟ್ಟ ಪ್ರಾಧಿಕಾರದಿಂದ ಭೂ ವಿನ್ಯಾಸ ಅನುಮೋದನೆಯನ್ನು ಪಡೆದುಕೊಂಡು ಅದರಂತೆ ಅಭಿವೃದ್ಧಿ ಪಡಿಸಬೇಕಾಗಿರುತ್ತದೆ. ಈ ಷರತ್ತುಗಳಿಗೆ ಬದ್ಧರಾಗದಿದ್ದ ಪಕ್ಷದಲ್ಲಿ ಭೂ ಪರಿವರ್ತನೆಯು ತನ್ನಿಂದ ತಾನೇ ರದ್ದಾಗುತ್ತದೆ ಎಂದು ಮಾಹಿತಿಯನ್ನು ನೀಡಿದರು.

ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) ಅನುಮೋದನೆಗೆ ಸಂಬಂಧಿಸಿದಂತೆ ದಿನಾಂಕ:17.01.2013ರ ಪ್ರಾಧಿಕಾರದ ಸಭೆಯಲ್ಲಿ ಸಾರ್ವಜನಿಕ ಸಲಹೆ ಮತ್ತು ಆಕ್ಷೇಪಣೆ ಬಗ್ಗೆ ತೆಗೆದುಕೊಂಡಿರುವ ನಿರ್ಣಯಗಳನ್ನು ಪ್ರತಿಯೊಬ್ಬ ಆಕ್ಷೇಪಣೆದಾರಿಗೂ ತಿಳಿಸಿ, ನಿಗಧಿತ ಕಾಲಾವಕಾಶವನ್ನು ನೀಡಿ ಅವರಿಂದ ವಿವರಣೆಯನ್ನು ಪಡೆದುಕೊಳ್ಳುವ ಬಗ್ಗೆ ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರಿಂದ ಸೂಕ್ತ ಮಾರ್ಗದರ್ಶನವನ್ನು ಪಡೆದುಕೊಂಡು ಅದರಂತೆ ಕ್ರಮವಹಿಸಿ ಮುಂದಿನ ಸಭೆಯಲ್ಲಿ ಮಂಡಿಸಲು ಆಯುಕ್ತರಿಗೆ ಮಾನ್ಯ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು.

ಇದನ್ನು ಸಭೆಯಲ್ಲಿ ಹಾಜರಿದ್ದ ಸರ್ವ ಸದಸ್ಯರು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**<u>12) ವಿಷಯ ಸಂಖ್ಯೆ :– ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು</u>**

**1. ಕಚೇರಿ ಉಪಯೋಗಕ್ಕೆ ಒಂದು ಲ್ಯಾಪ್‌ಟಾಪ್‌ನ್ನು ಖರೀದಿಸಲು ಸಭಾ ಅನುಮೋದನೆಗಾಗಿ ಮಂಡಿಸಿದೆ.**

**<u>ನಿರ್ಣಯ:–</u>**ಲ್ಯಾಪ್‌ಟಾಪ್ ಖರೀದಿಸಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ಸಹಿ/–**
**(ಶ್ರೀ ಅನುರಾಗ್ ತಿವಾರಿ)**
**ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ,**
**ಹಾಗೂ ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/–**
**(ಶ್ರೀ ಬಿ.ಜಿ.ಗೋವಿಂದರಾಜು)**
**ಆಯುಕ್ತರು(ಪ್ರ),**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**"ನಕಲು"**
**ಸಹಿ/–**
**ಆಯುಕ್ತರು(ಪ್ರ),**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**